# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ : 0821-251397
ಮೊಬೈಲ್: 9448994744
e-mail :aeecescvvm@yahoo.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ.)
ಚಾ.ವಿ.ಸ.ನಿ.ನಿ., ವಿ.ವಿ.ಮೊಹಲ್ಲಾ ಉಪವಿಭಾಗ
ಮೈಸೂರು.

ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾ)/ವಿವಿಮೊ-ಉವಿ/17-18/ 1386 ದಿನಾಂಕ : 07.10.2017

## ಜನ ಸಂಪರ್ಕ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ಗ್ರಾಹಕರು

ದಿನಾಂಕ:31.08.2017, ಸಮಯ:3:00PM

1. ಶ್ರೀ ನರಸಿಂಹೇಗೌಡ, ಅಧೀಕ್ಷಕರ ಇಂಜಿನಿಯರ್(ವಿ)
2. ಶ್ರೀ ಸಿ. ಉಮೇಶ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ಉಪವಿಭಾಗ, ಮೈಸೂರು
3. ಶ್ರೀ ಮೋಹನ್.ಪಿ. ಲೆಕ್ಕಾಧಿಕಾರಿ, ವಿ.ವಿ.ಮೊಹಲ್ಲಾ ವಿಭಾಗ, ಮೈಸೂರು.
4. ಕುಮಾರಿ ಪ್ರಿಯಾಂಕ.ಎಸ್.ಡಿ, ಸಹಾಯಕ ಇಂಜಿನಿಯರ್(ವಿ)(ತಾಂತ್ರಿಕ), ಜಯಲಕ್ಷ್ಮೀಪುರಂ ಶಾಖೆ, ಮೈಸೂರು
5. ಕುಮಾರಿ ವಿಶಾಖ, ಸಹಾಯಕ ಇಂಜಿನಿಯರ್(ವಿ), ಜಯಲಕ್ಷ್ಮೀಪುರಂ ಶಾಖೆ, ಮೈಸೂರು
6. ಶ್ರೀ ಬಿ ಬಿ ಶಿವಣ್ಣ, ಸಹಾಯಕ ಇಂಜಿನಿಯರ್(ವಿ), ಒಂಟಿಕೊಪ್ಪಲ್ ಶಾಖೆ, ಮೈಸೂರು
7. ಶ್ರೀಮತಿ ಆರ್ ಹೇಮಲತಾ, ಸಹಾಯಕ ಇಂಜಿನಿಯರ್(ವಿ), ಎಂ.ಜಿ.ಕೊಪ್ಪಲ್ ಶಾಖೆ, ಮೈಸೂರು
8. ಶ್ರೀ ಕೆ ಎಸ್ ಬೋರೇಗೌಡ, ಸಹಾಯಕ ಇಂಜಿನಿಯರ್(ವಿ), ಮೇಟಗಳ್ಳಿ ಶಾಖೆ, ಮೈಸೂರು
9. ಶ್ರೀ ಸೈಯದ್, ಕಿರಿಯ ಇಂಜಿನಿಯರ್(ವಿ), ಜಯಲಕ್ಷ್ಮೀಪುರಂ ಶಾಖೆ, ಮೈಸೂರು
10. ಶ್ರೀ ಸುರೇಶ್, ಕಿರಿಯ ಇಂಜಿನಿಯರ್(ವಿ), ಒಂಟಿಕೊಪ್ಪಲ್ ಶಾಖೆ, ಮೈಸೂರು
11. ಶ್ರೀ ನಾಗೇಶ್, ಕಿರಿಯ ಇಂಜಿನಿಯರ್(ವಿ), ಎಂ.ಜಿ.ಕೊಪ್ಪಲ್ ಶಾಖೆ, ಮೈಸೂರು
12. ಶ್ರೀ ಮಹಾಂತಪ್ಪ, ಕಿರಿಯ ಇಂಜಿನಿಯರ್(ವಿ), ಮೇಟಗಳ್ಳಿ ಶಾಖೆ, ಮೈಸೂರು
13. ಶ್ರೀ ಅಶ್ವಥ್ ನಾರಾಯಣ್, ಗ್ರಾಹಕರು.
14. ಶ್ರೀ. ಕೆ.ಬಿ.ಲಿಂಗರಾಜು, ಗ್ರಾಹಕರು.
15. ಶ್ರೀ. ಕೆ.ರಮೇಶ್, ಗ್ರಾಹಕರು.
16. ಶ್ರೀ. ರಂಗಯ್ಯ, ಗ್ರಾಹಕರು.
17. ಶ್ರೀಮತಿ.ಉಮಾದೇವಮ್ಮ, ಗ್ರಾಹಕರು.
18. ಶ್ರೀಮತಿ.ನಾಗರತ್ನ, ಗ್ರಾಹಕರು.

## ಸಭೆಯಲ್ಲಿ ಈ ಕೆಳಕಂಡ ವಿದ್ಯುತ್ ಸಮಸ್ಯೆಗಳನ್ನು ಕುರಿತು ಚರ್ಚಿಸಲಾಯಿತು.

1. ಸಭೆಯಲ್ಲಿ ಹಾಜರಿದ್ದ ಕೆ.ಬಿ.ಲಿಂಗರಾಜು, ಕುಂಬಾರುಕೊಪ್ಪಲಿನ ನಿವಾಸಿ, ಸದರಿ ಜನ ಸಂಪರ್ಕ ಸಭೆಯ ಕುರಿತು ಸಂದೇಶವನ್ನು ಗ್ರಾಹಕರ ಮೊಬೈಲ್ ಸಂಖ್ಯೆಗೆ ನೇರವಾಗಿ ಕಳುಹಿಸುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

ಇದಕ್ಕೆ ಪ್ರತಿಕ್ರಿಯೆ ನೀಡಿದ ಅಧೀಕ್ಷಕ ಇಂಜಿನಿಯರ್ ರವರು ಮುಂಬರುವ ದಿನಗಳಲ್ಲಿ ಸಂದೇಶ ಕೊಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

2. ಸಭೆಯಲ್ಲಿ ಹಾಜರಿದ್ದ ಕೆ.ಜಿ.ಲಿಂಗರಾಜು, ಕುಂಬಾರುಕೊಪ್ಪಲಿನ ನಿವಾಸಿ, ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಅವರ ಕಿರಣ್ ಇಂಡಸ್ಟ್ರೀಸ್ ಇಲ್ಲಿಗೆ ಸಂಬಂಧ ಪಟ್ಟ ದೂರನ್ನು ಬಹಳ ನಿಧಾನವಾಗಿ ಪರಿಹರಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.
ಇದಕ್ಕೆ ಪ್ರತಿಕ್ರಿಯೆ ನೀಡಿದ ಅಧೀಕ್ಷಕ ಇಂಜಿನಿಯರ್ ರವರು ವಿದ್ಯುತ್ ಸಂಬಧಿಸಿದ ದೂರುಗಳ ತುರ್ತು ನಿರ್ವಹಣೆಗೆ ನಿಗಮದ ಸಹಾಯವಾಣಿ 1912 ಗೆ ಕರೆಮಾಡಲು ತಿಳಿಸಿದರು.

3. ಸಭೆಯಲ್ಲಿ ಹಾಜರಿದ್ದ ಉಮಾದೇವಮ್ಮ, ಗ್ರಾಹಕರು, ಉಪ-ವಿಭಾಗ ವ್ಯಾಪ್ತಿಯ ಹಂಪಿ ವೃತ್ತ ಹಾಗು ತ್ರಿನೇತ್ರ ವೃತ್ತದಲ್ಲಿ ನಿರಂತರವಾಗಿ ಬೀದಿ ದೀಪಗಳು ಉರಿಯುತ್ತಿರುತ್ತದೆ ಎಂದು ದೂರಿರುತ್ತಾರೆ.
ಇದಕ್ಕೆ ಪ್ರತಿಕ್ರಿಯೆ ನೀಡಿದ ಅಧೀಕ್ಷಕ ಇಂಜಿನಿಯರ್ ರವರು ಒಂಟಿಕೊಪ್ಪಲ್, ಜಯಲಕ್ಷ್ಮಿಪುರಂ, ಎಂ.ಜಿ ಕೊಪ್ಪಲ್ ಶಾಖಾಧಿಕಾರಿಗಳಿಗೆ, ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

4. ಸಭೆಯಲ್ಲಿ ಹಾಜರಿದ್ದ ಕೆ.ರಮೇಶ್, ಗ್ರಾಹಕರು ಹಾಗು ರಂಗಯ್ಯ ಗ್ರಾಹಕರ ಸಲಹಾ ಸಮಿತಿ ಸದಸ್ಯರು, ಉಪ-ವಿಭಾಗ ವ್ಯಾಪ್ತಿಯ ಎಂ.ಜಿ.ಕೊಪ್ಪಲು ಹಾಗು ಮಂಜುನಾಥಪುರದಲ್ಲಿರುವ ಶಿಥಿಲಗೊಂಡಿರುವ ಕಂಬಗಳನ್ನು ಬದಲಾಯಿಸಿ ಹಳೆ ಕಂಬಗಳನ್ನು ಸ್ಥಳದಲ್ಲೇ ಬಿಟ್ಟಿರುತ್ತಾರೆ ಎಂದು ದೂರಿರುತ್ತಾರೆ.
ಇದಕ್ಕೆ ಪ್ರತಿಕ್ರಿಯೆ ನೀಡಿದ ಅಧೀಕ್ಷಕ ಇಂಜಿನಿಯರ್ ರವರು ಶಿಥಿಲಗೊಂಡಿರುವ ಕಂಬಗಳನ್ನು ಬದಲಾಯಿಸುವ ಕೆಲಸವನ್ನು RAPDRP-B ಯೋಜನೆಯಡಿ ಗುತ್ತಿಗೆದಾರರು ನಿರ್ವಹಿಸಿರುತ್ತಾರೆ. ಸದರಿ ಗುತ್ತಿಗೆದಾರರಿಗೆ ಹಳೆಯ ಕಂಬಗಳನ್ನು ಸ್ಥಳಾಂತರಿಸಲು ಸೂಚಿಸಲಾಗುವುದು ಎಂದು ತಿಳಿಸಿದರು.

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ., ವಿ.ವಿ.ಮೊಹಲ್ಲಾ ವಿಭಾಗ, ಮೈಸೂರು.